ದಿನಾಂಕಃ 07-01-2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

¥ÁnÃ ¸ªÁ®Ä 8 jÁz 12 ¥ïwªÁ¢AiÄ ¥gªÁV

²Ã.«.JA.JA. ªQÃ®jÁzÀ

ನನ್ನ ತಂದೆ ಹೊನ್ನಗುಡ್ಡೆಪ್ಪನ ತಂದೆಯ ಹೆಸರು ಸಾಬಗೌಡ. ನನ್ನ ತಾತ ಸಾಬಗೌಡನ ತಂದೆಯ ಹೆಸರು ನನಗೆ ಗೊತ್ತಿಲ್ಲ. ನನ್ನ ತಾತ ಸಾಬಗೌಡನಿಗೆ ಯಾರು ಅಣ್ಣ-ತಮ್ಮಂದಿರು ಇರುವುದಿಲ್ಲ. ನನ್ನ ತಾತ ಸಾಬಗೌಡನಿಗೆ 1) ಹೊನ್ನಗುಡ್ಡಪ್ಪ ಮತ್ತು 2) ಹನುಮಪ್ಪ ಎನ್ನುವ ಇಬ್ಬರು ಮಕ್ಕಳು. ಸದರಿ ಹನುಮಪ್ಪನಿಗೆ 3 ಜನ ಮಕ್ಕಳು, ಅವರೆಂದರೆ 1) ಸಾಬಗೌಡ 2) ಭೀಮಪ್ಪ 3) ರಂಗಪ್ಪ. ಸದರಿ ಹನುಮಪ್ಪನ ಹೆಂಡತಿಯ ಹೆಸರು ತಿಮ್ಮವ್ವ. 30 ವರ್ಷಗಳ ಹಿಂದೆ ಸದರಿ ಹನುಮಪ್ಪ ಮರಣ ಹೊಂದಿದ್ದಾನೆ. ಸದರಿ ಹನುಮಪ್ಪನ ಹೆಂಡತಿಯ ತಿಮ್ಮವ್ವ 25 ವರ್ಷಗಳ ಹಿಂದೆ ಮರಣ ಹೊಂದಿದ್ದಾಳೆ. ಸದರಿ ಹನುಮಪ್ಪನ ಮಕ್ಕಳಾದ 1) ಸಾಬಗೌಡ 2) ಭೀಮಪ್ಪ 3) ರಂಗಪ್ಪ ಈಗ ಮರಣ ಹೊಂದಿದ್ದಾರೆ. ಸದರಿ ಹನುಮಪ್ಪನ ಮಗನಾದ ಸಾಬಗೌಡನಿಗೆ 3 ಜನ ಗಂಡು ಮಕ್ಕಳು ಮತ್ತು 5 ಜನ ಹೆಣ್ಣು ಮಕ್ಕಳು. ಸದರಿ ಹೆಣ್ಣು ಮಕ್ಕಳ ಹೆಸರುಗಳು ಏನೆಂದರೆ 1) ಮಂಗಮ್ಮ 2) ಭೀಮವ್ವ 3) ಸಂಗಮ್ಮ 4) ರಂಗವ್ವ 5) ನಾಗಮ್ಮ ಆಗಿದೆ. ಸದರಿ 5 ಜನ ಹೆಣ್ಣು ಮಕ್ಕಳು ಮರಣ ಹೊಂದಿದ್ದಾರೆ. ಸದರಿ 5 ಜನ ಹೆಣ್ಣು ಮಕ್ಕಳಿಗೆ ಮಕ್ಕಳ ಇದ್ದಾರೆ. ಸದರಿ

5 ಜನ ಹೆಣ್ಣು ಮಕ್ಕಳಿಗೆ ಎಷ್ಟು ಜನ ಮಕ್ಕಳು ಇದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಮೃತ ಪಟ್ಟ 5 ಜನ ಹೆಣ್ಣು ಮಕ್ಕಳ ಮಕ್ಕಳುಗಳನ್ನು ನಾನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರ್ಪಡೆ ಮಾಡಿರುವುರುದಿಲ್ಲ. ಸದರಿ ಹನುಮಪ್ಪನ ಮಗನಾದ ರಂಗಪ್ಪನಿಗೆ ಮಲ್ಲಯ್ಯ ಎನ್ನುವ ಒಬ್ಬನೇ ಮಗ. ಸದರಿ ಹನುಮಪ್ಪನ ಮಗನಾದ ಭೀಮಪ್ಪನಿಗೆ 1) ಹನುಮಪ್ಪ 2) ಆಂಜನೇಯ್ಯ 3) ನಾಗರಾಜ ಎನ್ನುವ 3 ಜನ ಮಕ್ಕಳು. ಸದರಿ ಆಂಜನೇಯ್ಯ 3 ವರ್ಷದ ಹಿಂದೆ ಮರಣ ಹೊಂದಿದ್ದಾನೆ. ಸದರಿ ಆಂಜನೇಯ್ಯನಿಗೆ ಒಬ್ಬನೇ ಮಗ ಆತನ ಹೆಸರು ನನಗೆ ಗೊತ್ತಿಲ್ಲ. ಸದರಿ ಆಂಜನೇಯ್ಯನ ಹೆಂಡತಿ ಶಾರದಮ್ಮ ಈಗ ಜೀವಂತವಾಗಿದ್ದಾಳೆ. ನನ್ನ ತಂದೆ ಹೊನಗುಡ್ಡೆಪ್ಪನಿಗೆ 3 ಜನ ಮಕ್ಕಳು ಅವರೆಂದರೆ 1) ರಾಮಚಂದ್ರ 2) ಹನುಮಂತ್ರಾಯ(ವಾದಿ) 3) ರಂಗಪ್ಪ ಆಗಿದ್ದಾರೆ. ಸದರಿ ರಾಮಚಂದ್ರನಿಗೆ ಭಿಮವ್ವ ಎನ್ನುವ ಹೆಂಡತಿ ಮತ್ತು ಒಬ್ಬ ಹೊನ್ನಗುಡ್ಡೆಪ್ಪ ಎನ್ನುವ ಮಗ ಇದ್ದಾನೆ. ಸದರಿ ರಾಮಚಂದ್ರನ ಮಗನಾದ ಹೊನ್ನಗುಡ್ಡೆಪ್ಪನಿಗೆ ನಾನು ಈ ದಾವೆಯಲ್ಲಿ ಪಕ್ಷಗಾರನೆಂದು ಸೇರ್ಪಡೆ ಮಾಡಿರುವುದಿಲ್ಲ. ಮೂಲ ಪುರುಷ ಹನುಮಂತನ 3 ಜನ ಗಂಡು ಮಕ್ಕಳಾದ 1)ಸಾಬಗೌಡ 2) ರಂಗಪ್ಪ 3)ಭೀಮಪ್ಪ ರವರ ವಾರಸುದಾರರನ್ನು ಈ ದಾವೆಯಲ್ಲಿ ನಾನು ಪಕ್ಷಗಾರರೆಂದು ಸೇರ್ಪಡೆ ಮಾಡಿರುವುದಿಲ್ಲ. ನಮ್ಮ ಊರಿನಲ್ಲಿ ಹನುಮಂತ ಎನ್ನುವ ಹೆಸರಿನ 3-4 ಜನ ವ್ಯಕ್ತಿಗಳು ಇದ್ದಾರೆ. ನಮ್ಮ ಊರಿನಲ್ಲಿ ಹೊನ್ನಗುಡ್ಡೆಪ್ಪ ಎನ್ನುವ ಹೆಸರಿನ 2-3 ಜನ ವ್ಯಕ್ತಿಗಳು ಇದ್ದಾರೆ. ನಮ್ಮ ಊರಿನಲ್ಲಿ ಸಾಬಗೌಡ

ಎನ್ನುವ ಹೆಸರಿನ ಒಬ್ಬ ವ್ಯಕ್ತಿ ಮಾತ್ರ ಇದ್ದಾನೆ. ನಮ್ಮ ಊರಿನಲ್ಲಿ ಸಾಬಗೌಡ ಎನ್ನುವ ಹೆಸರಿನ 3-4 ವ್ಯಕ್ತಿಗಳು ಇದ್ದರು ಸಹ ಕೇವಲ ಒಬ್ಬ ವ್ಯಕ್ತಿ ಮಾತ್ರ ಇದ್ದಾನೆ ಎಂದು ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಊರಿನಲ್ಲಿ ರಂಗಪ್ಪ ಮತ್ತು ಭಿಮಪ್ಪ ಎನ್ನುವ ಹೆಸರುಗಳ 2-3 ಜನ ವ್ಯಕ್ತಿಗಳು ಇದ್ದಾರೆ. ನಮ್ಮ ಊರಿನಲ್ಲಿ ನಾಗರಾಜ ಮತ್ತು ರಾಮನಗೌಡ ಎನ್ನುವ ಹೆಸರುಗಳ ಇಬ್ಬರು ವ್ಯಕ್ತಿಗಳು ಇದ್ದಾರೆ. ದಾವಾ ಪತ್ರದೊಂದಿಗೆ ಲಗತ್ತಿಸಿರುವ ಅನುಭಂದ ಬ ವಂಶಾವಳಿಯಲ್ಲಿ ತೋರಿಸಿರುವ 2) ರಂಗಪ್ಪ (ಪೋತಿ)ಯ ತಂದೆಯ ಹೆಸರು ನನಗೆ ಹೇಳಲು ಬರುವುದಿಲ್ಲ. ಸದರಿ ರಂಗಪ್ಪನ ಹೆಂಡತಿಯ ಹೆಸರು ರಂಗಮ್ಮ ಆಗಿದೆ. ಸದರಿ ರಂಗಪ್ಪನಿಗೆ ಸ್ವಂತ ಸಹೋದರರು ಇರುವುದಿಲ್ಲ. ಸದರಿ ರಂಗಪ್ಪನ ಹೆಂಡತಿಯಾದ ರಂಗಮ್ಮಳ ತವರೂರು ಯಾವುದು ಎನ್ನುವುದು ನನಗೆ ಗೊತ್ತಿಲ್ಲ. ಸದರಿ ರಂಗಪ್ಪ ಮತ್ತು ಆತನ ಹೆಂಡತಿ ರಂಗಮ್ಮ 40 ವರ್ಷಗಳ ಹಿಂದೆ ಮರಣ ಹೊಂದಿದ್ದಾಳೆ ಸದರಿಯವರನ್ನು ನಾನು ನೋಡಿರುವುದಿಲ್ಲ. ಸದರಿ ರಂಗಪ್ಪ ಮತ್ತು ಆತನ ಹೆಂಡತಿ ರಂಗಮ್ಮ ದುಡಿಯಲು ಮುಂಬಯಿಗೆ ಹೋದಾಗ ಮರಣ ಹೊಂದಿದ್ದಾರೆ. ಸದರಿ ರಂಗಪ್ಪನಿಗೆ ಮಲ್ಲಯ್ಯ ಎನ್ನುವ ಒಬ್ಬನೇ ಮಗ. ಸದರಿ ರಂಗಪ್ಪನ ಮಗನಾದ ಮಲ್ಲಯ್ಯ ಮದುವೆ ಆಗಿರಲಿಲ್ಲ. ಸದರಿ ಮಲ್ಲಯ್ಯ 40 ವರ್ಷಗಳ ಹಿಂದೆ ಮರಣ ಹೊಂದಿದ್ದಾನೆ. ಸದರಿ ಮಲ್ಲಯ್ಯ ದುಡಿಯಲು ಮುಂಬಯಿಗೆ ಹೋದಾಗ ಮರಣ ಹೊಂದಿದ್ದಾನೆ, ಆತನನ್ನು ನಾನು ನೋಡಿರುವುದಿಲ್ಲ. ಸದರಿ ರಂಗಯ್ಯನಿಗೆ 1) ಮಲ್ಲಯ್ಯ

2)ಹನುಮಪ್ಪ ಇಬ್ಬರು ಮಕ್ಕಳು ಇದ್ದಾರೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಮಲ್ಲಯ್ಯ ಮಾತ್ರ ಒಬ್ಬನೇ ಮಗ ಎಂದು ನುಡಿಯುತ್ತಾನೆ. ಹನುಮಪ್ಪ ತಂದೆ ರಂಗಯ್ಯನಿಗೆ 1) ಸಾಹೇಬಗೌಡ 2) ರಂಗಪ್ಪ @ ರಂಗಣ್ಣ ಮತ್ತು 3) ಭೀಮಪ್ಪ @ ಭೀಮಣ್ಣ ಎನ್ನುವ 3 ಜನ ಮಕ್ಕಳು ಎಂದರೆ ಸರಿ. ಸದರಿ ಸಾಹೇಬಗೌಡನಿಗೆ ದೊಡ್ಡ ಬಸಮ್ಮ ಎನ್ನುವ ಹೆಂಡತಿ ಎಂದರೆ ಸರಿ. ಸದರಿ ಸಾಹೇಬಗೌಡ ಈಗ ಮರಣ ಹೊಂದಿದ್ದಾನೆ ಮತ್ತು ಆತನ ಹೆಂಡತಿ ದೊಡ್ಡ ಬಸಮ್ಮ ಈಗ ಜೀವಂತವಾಗಿದ್ದಾಳೆ ಎಂದರೆ ಸರಿ. ಸದರಿ ಸಾಹೇಬಗೌಡ ಮತ್ತು ದೊಡ್ಡ ಬಸಮ್ಮಳಿಗೆ 5 ಜನ ಗಂಡು ಮಕ್ಕಳು, ಅವರೆಂದರೆ 1) ದೇವೆಂದ್ರಪ್ಪ 2) ಶರಣಪ್ಪ 3) ನಾಗರಾಜ 4) ಬಸಯ್ಯ ಮತ್ತು 5) ಮಾರೇಪ್ಪ (3 ರಿಂದ 7ನೇ ಪ್ರತಿವಾದಿಗಳು) ಹಾಗೂ ಇಬ್ಬರು ಹೆಣ್ಣು ಮಕ್ಕಳು ಅವರೆಂದರೆ 1) ಮುತ್ತಮ್ಮ 2) ಸಿದ್ದಮ್ಮ ಆಗಿದ್ದಾರೆ ಎಂದರೆ ಸರಿ. ಸದರಿ ಸಾಹೇಬಗೌಡನ ತಮ್ಮನಾದ ರಂಗಪ್ಪ @ ರಂಗಣ್ಣನಿಗೆ ಸಣ್ಣ ಬಸಮ್ಮ ಎನ್ನುವ ಹೆಂಡತಿ ಹಾಗೂ ರಾಮನಗೌಡ ಮತ್ತು ಆಂಜನೆಯ್ಯ (8 ಮತ್ತು 9 ನೇ ಪ್ರತಿವಾದಿ) ಎನ್ನುವ ಇಬ್ಬರು ಮಕ್ಕಳು ಆಗಿದ್ದಾರೆ ಎಂದರೆ ಸರಿ. ಸದರಿ ಸಣ್ಣಬಸಮ್ಮ ಈಗ ಜೀವಂತವಾಗಿದ್ದಾಳೆ. ಸದರಿ ಸಾಹೇಬಗೌಡನ ಇನ್ನೊಬ್ಬ ತಮ್ಮನಾದ ಭೀಮಪ್ಪ @ ಭೀಮಣ್ಣನಿಗೆ 3 ಜನ ಗಂಡು ಮಕ್ಕಳು 1) ಹನುಮಂತ(10ನೇ ಪ್ರತಿವಾದಿ) 2) ಆಂಜನೇಯ್ಯ 3) ನಾಗರಾಜ(11ನೇ ಪ್ರತಿವಾದಿ) ಹಾಗೂ ಇಬ್ಬರು ಹೆಣ್ಣು ಮಕ್ಕಳು 1) ಪಾರ್ವತಿ ಮತ್ತು ಲಕ್ಷ್ಮಿ ಆಗಿದ್ದಾರೆ ಎಂದರೆ ಸರಿ. ಸದರಿ ಆಂಜನೇಯ್ಯನ

ಹೆಂಡತಿ ಶಾರದಮ್ಮ(12ನೇ ಪ್ರತಿವಾದಿ) ಮತ್ತು ಒಬ್ಬ ಗಂಡು ಮಗ ವೆಂಕಟೇಶ ಮತ್ತು ಇಬ್ಬರು ಹೆಣ್ಣು ಮಕ್ಕಳು 1) ಸುಮಿತ್ರಾ 2) ಪ್ರಿಯಂಕಾ ಆಗಿದ್ದಾರೆ ಎಂದರೆ ಸರಿ. ಈ ದಾವೆಯಲ್ಲಿ ನಾನು ಸಾಹೇಬಗೌಡನ ಹೆಂಡತಿಯಾದ ದೊಡ್ಡ ಬಸಮ್ಮ ಮತ್ತು ರಂಗಪ್ಪ @ ರಂಗಣ್ಣನ ಹೆಂಡತಿಯಾದ ಸಣ್ಣ ಬಸಮ್ಮರವರನ್ನು ಪಕ್ಷಗಾರರೆಂದು ಸೇರ್ಪಡೆ ಮಾಡಿರುವುದಿಲ್ಲ ಎಂದರೆ ಸರಿ. ಸದರಿ ಸಾಹೇಬಗೌಡನ ಹೆಣ್ಣು ಮಕ್ಕಳಾದ ಮುತ್ತಮ್ಮ ಮತ್ತು ಸಿದ್ದಮ್ಮರವರನ್ನು ಸಹ ನಾನು ಈ ದಾವೆಯಲ್ಲಿ ಪಕ್ಷಗಾರರೆಂದು ಸೇರ್ಪಡೆ ಮಾಡಿರುವುದಿಲ್ಲ ಎಂದರೆ ಸರಿ. ಸದರಿ ಭೀಮಪ್ಪ @ ಭೀಮಣ್ಣನ ಹೆಣ್ಣು ಮಕ್ಕಳಾದ ಪಾರ್ವತಿ ಮತ್ತು ಲಕ್ಷ್ಮಿರವರನ್ನು ಸಹ ನಾನು ಈ ದಾವೆಯಲ್ಲಿ ಪಕ್ಷಗಾರರೆಂದು ಸೇರ್ಪಡೆ ಮಾಡಿರುವುದಿಲ್ಲ ಎಂದರೆ ಸರಿ. ಸದರಿ ಆಂಜನೆಯ್ಯನ 3 ಜನ ಮಕ್ಕಳಾದ ವೆಂಕಟೇಶ, ಸುಮಿತ್ರಾ ಪ್ರಿಯಂಕಾ ರವರನ್ನು ಸಹ ನಾನು ಈ ದಾವೆಯಲ್ಲಿ ಪಕ್ಷಗಾರರೆಂದು ಸೇರ್ಪಡೆ ಮಾಡಿರುವುದಿಲ್ಲ ಎಂದರೆ ಸರಿ. ಸದರಿ ಸಾಹೇಬಗೌಡನ ತಂದೆ ಹನುಮಪ್ಪ @ ಹನುಮಂತ ಮತ್ತು ಮಲ್ಲಯ್ಯ ಸ್ವಂತ ಸಹೋದರರು ಎಂದರೆ ಸರಿ. ಸದರಿ ಹನುಮಪ್ಪ @ ಹನುಮಂತ ತಂದೆ ರಂಗಯ್ಯನ ಕುಟುಂಬಕ್ಕೂ(ಪ್ರತಿವಾದಿಗಳಿಗೂ) ಮತ್ತು ನನಗೂ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸದರಿ ಹನುಮಪ್ಪ @ ಹನುಮಂತ ತಂದೆ ರಂಗಯ್ಯನ ಕುಟುಂಬಕ್ಕೂ(ಪ್ರತಿವಾದಿಗಳ) ಮತ್ತು ದಾವಾ ಸ್ವತ್ತಿಗೂ ಯಾವುದೇ ಸಂಬಂಧ ಹೊಂದದೇ ಇದ್ದರೂ ಸಹ ಸುಳ್ಳು ವಂಶಾವಳಿಯನ್ನು

ತೋರಿಸಿ ದಾವಾ ಸ್ವತ್ತನ್ನು ಕಬಳಿಸುವ ಸಲುವಾಗಿ ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಬೇಡಿರುವುದರಿಂದ ಮುಂದೂಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನ ಮೇರೆಗೆ ಬೆರಳಚ್ಚು ಮಾಡಲಾಗಿದೆ. )

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಹಾಗೂ ಜೆಎಂಎಫ್‌ಸಿ ನ್ಯಾಯಾಲಯ
ದೇವದುರ್ಗ